## ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ

## ನ್ಯಾಯಾಲಯ., ಆಳಂದ

ಸಿ.ಸಿ.ನಂ:   3639/2023

ಸಿ.ಡಬ್ಲ್ಯೂ-5   ಪಿ.ಡಬ್ಲ್ಯೂ-4

| | | |
|---|---|---|
| ಹೆಸರು | ಃ | ಮಂಜುನಾಥ |
| ತಂದೆಃಗಂಡ | ಃ | ಗುರುಬಸಪ್ಪ |
| ವಯಸ್ಸು | ಃ | 33 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | ಃ | ಖಜೂರಿ |

ದಿನಾಂಕಃ17.10.2025

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ- ೧ ರಿಂದ ೪ ಮತ್ತು ೬ ರಿಂದ ೯ ಪರಿಚಯ ಇರುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲಿಸರು ನನ್ನ ಸುಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಮತ್ತು ಯಾವುದೇ ಮು.ಮಾಲನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ ಪೋಲಿಸರು ಒಂದು ದಾಖಲೆಯ ಮೇಲೆ ಸಹಿ ಮಾಡು ಎಂದು ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯೂ ನಿಪಿ-೧ರಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-೧(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು : ಸ.ಸ.ಅ. ವಕೀಲರಿಂದ.**

ಸಾಕ್ಷಿಗೆ ಈಗ ದಿಃ ೧೦-೦೯-೨೦೨೨ ರಂದು ನನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿ ಒಂದು ನಾಡ ಪಿಸ್ತೂಲ್‌ನ್ನು ಜಿಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ. ೧ ರಲ್ಲಿ ಇರುವ ಮಾಹಿತಿ ಗೊತ್ತಿದ್ದರೂ ಸಹಿತ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು, ಆಳಂದ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ**

**ನ್ಯಾಯಾಲಯ., ಆಳಂದ**

ಸಿ.ಸಿ.ನಂ: 3639/2023

ಸಿ.ಡಬ್ಲ್ಯೂ-1 ಪಿ.ಡಬ್ಲ್ಯೂ-3

| | | |
|---|---|---|
| ಹೆಸರು | ಃ | ಸಂಜುಕಮಾರ |
| ತಂದೆಃಗಂಡ | ಃ | ಶ್ರೀಶೈಲ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಖಜೂರಿ |

ದಿನಾಂಕಃ17.10.2025

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ- 2 ರಿಂದ 9 ಪರಿಚಯ ಇರುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ದಿಃ 03.09.2022 ರಂದು ರಾತ್ರಿ 10.00 ಗಂಟೆಗೆ ಆರೋಪಿತರು ಯಾವುದೇ ಜಗಳ ಮಾಡಿರುವುದಿಲ್ಲ ಹೊಡಬಡೆ ಮಾಡಿರುವುದಿಲ್ಲ ಅವಾಚ್ಯವಾಗಿ ಬೈದಿರುವುದಿಲ್ಲ ಮತ್ತು ಯಾವುದೇ ಬಂದೂಕು ತೋರಿಸಿ ಜೀವ ಬೇದರಿಕೆ ಹಾಕಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ಪೋಲಿಸರು ಒಂದು ದಾಖಲೆಯ ಮೇಲೆ ಸಹಿ ಮಾಡು ಅಂತಾ ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು : ಸ.ಸ.ಅ. ವಕೀಲರಿಂದ.**

ದಿಃ 10.09.2022 ರಂದು ಮಧ್ಯಾಹ್ನ 03.30 ಗಂಟೆಗೆ ನಾನು ತೋರಿಸಿದ ಗುನ್ನಾ ಸ್ಥಳದಲ್ಲಿ ಪೋಲಿಸರು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ. 3 ರಲ್ಲಿ ಇರುವ ಮಾಹಿತಿ ಗೊತ್ತಿದ್ದರೂ ಸಹಿತ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು, ಆಳಂದ